# ಬುಡಕಟ್ಟು ಜನರ ಹೆರಿಟೇಜ್ ರೈಲು!




ಗುಜರಾತ್‌ನಲ್ಲಿನ 'ಬಿಲಿಮೊರಾ ವಾಘೈ' ನ್ಯಾರೋಗೇಜ್ ಹೆರಿಟೇಜ್ ರೈಲು ಮಾರ್ಗ, ರೈಲು ಪಯಣದ ವಿಭಿನ್ನ ಅನುಭವ ನೀಡುವುದರೊಂದಿಗೆ ಅಲ್ಲಿನ ಸಸ್ಯಸಂಕುಲ, ಬುಡಕಟ್ಟು ಜನಜೀವನದ ಪರಿಚಯವನ್ನೂ ಮಾಡಿಕೊಡುತ್ತದೆ.

■ ಜಿ. ನಾಗೇಂದ್ರ ಕಾವೂರು

ಗುಜರಾತ್‌ನ ಡಾಂಗ್ ಜಿಲ್ಲೆ ಹಲವು ಪ್ರವಾಸಿತಾಣಗಳಿಗೆ ಹೆಸರುವಾಸಿ. ಮಳೆಗಾಲದಲ್ಲಿ ಮೈತುಂಬಿ ಹರಿಯುವ ನದಿಗಳು, ಜಲಪಾತಗಳು ಪ್ರವಾಸಿಗರನ್ನು ಸೆಳೆಯುತ್ತವೆ. ಅಂಥದೊಂದು ಪ್ರವಾಸಿ ತಾಣ, ಪ್ರಮುಖ ಪಟ್ಟಣ ಮತ್ತು ತಾಲ್ಲೂಕು ಕೇಂದ್ರ ವಾಘೈನಲ್ಲಿರುವ ನ್ಯಾರೋಗೇಜ್ ಹೆರಿಟೇಜ್ ರೈಲು ಮಾರ್ಗ ಮತ್ತು ಸಸ್ಯೋದ್ಯಾನ.

ವಾಘೈನಿಂದ 4 ಕಿ.ಮೀ. ದೂರದಲ್ಲಿ, ಸುಮಾರು 24 ಹೆಕ್ಟೇರ್ ಪ್ರದೇಶದಲ್ಲಿರುವ ಸಸ್ಯೋದ್ಯಾನದಲ್ಲಿ ಭಾರತದ ವಿವಿಧ ಭಾಗಗಳಲ್ಲಿನ 1400 ವಿವಿಧ ಸಸ್ಯಪ್ರಭೇದಗಳನ್ನು ಸಂರಕ್ಷಿಸಲಾಗಿದೆ. ವಿವಿಧ ಜಾತಿಯ ಗಿಡಮರಗಳಿಂದ ಕೂಡಿರುವ ಉದ್ಯಾನದಲ್ಲಿ ಗೋಲ್ಡನ್ ಬಿದಿರು, ಬಿಯರ್ ಬಾಟಲ್ ಬಿದಿರು, ಚೈನೀಸ್ ಬಿದಿರು ಮುಂತಾದ ಅಪರೂಪದ ಹಾಗೂ ಆಲಂಕಾರಿಕ ಬಿದಿರಿನ ಪ್ರಭೇದಗಳನ್ನೂ ಕಾಣಬಹುದು.

111 ವರ್ಷಗಳನ್ನು ಪೂರೈಸಿರುವ 'ಬಿಲಿಮೊರಾ–ವಾಘೈ' ನ್ಯಾರೋಗೇಜ್ ಹೆರಿಟೇಜ್ ರೈಲುಮಾರ್ಗ ವಾಘೈ ಪಟ್ಟಣದ ಪ್ರಮುಖ ಆಕರ್ಷಣೆ. ಈ ಭಾಗದಲ್ಲಿ ವಾಸಿಸುವ ಬುಡಕಟ್ಟು ಸಮುದಾಯಕ್ಕೆ ಸಾಂಸ್ಕೃತಿಕ ಮತ್ತು ಆರ್ಥಿಕ ಮಹತ್ವವನ್ನು ನೀಡಲು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸಲು ಐದು ನ್ಯಾರೋಗೇಜ್ ಲೈನ್‌ಗಳನ್ನು ಇಂದಿಗೂ ಸಂರಕ್ಷಿಸಲಾಗಿದೆ. ಈ ಐದು ಮಾರ್ಗಗಳನ್ನೂ 19ನೇ ಶತಮಾನಕ್ಕೂ ಹಿಂದೆ ನಿರ್ಮಿಸಲಾಗಿದ್ದು, ಈ ಮಾರ್ಗಗಳಲ್ಲಿ ಇಂದಿಗೂ ರೈಲುಗಳು ಸಂಚರಿಸುತ್ತಿವೆ. ರಾಜರ ಅಧೀನದ ಗಾಯಕ್ವಾಡ್ ಬರೋಡಾ ಸ್ಟೇಟ್ ರೈಲ್ವೆ (GBSR) ಒಡೆತನದಲ್ಲಿದ್ದ ಈ ರೈಲು ಮಾರ್ಗಗಳನ್ನು ಪ್ರಸ್ತುತ ಪಶ್ಚಿಮ ರೈಲ್ವೆ ನಿರ್ವಹಿಸುತ್ತಿದೆ. ಈ ಐದು ರೈಲು ಮಾರ್ಗಗಳ ಒಟ್ಟು ಉದ್ದ ಕೇವಲ 204 ಕಿ.ಮೀ.

1913ರಲ್ಲಿ ಮಹಾರಾಜ ಸಯ್ಯಾಜಿರಾವ್ ಗಾಯಕ್ವಾಡ್ ದೂರದರ್ಶಿತ್ವದಲ್ಲಿ ಬ್ರಿಟಿಷರು ಹಾಕಿಸಿದ ಬಿಲಿಮೊರಾ–ವಾಘೈ ರೈಲು ಮಾರ್ಗದ ಉದ್ದ 63 ಕಿ.ಮೀ. ಸಂರಕ್ಷಿಸಲಾಗಿರುವ ಐದು ನ್ಯಾರೋಗೇಜ್ ರೈಲು ಮಾರ್ಗಗಳ ಪೈಕಿ, ಅತಿ ಹೆಚ್ಚು ಉದ್ದದ ರೈಲು ಮಾರ್ಗ ಇದಾಗಿದೆ. ಪ್ರಾರಂಭದಲ್ಲಿ ಕಾಡುಗಳಿಂದ ಅಮೂಲ್ಯವಾದ ತೇಗದ ಮರದ ದಿಮ್ಮಿಗಳನ್ನು ಸಾಗಿಸಲು ಈ ರೈಲು ಮಾರ್ಗ ಬಳಸುತ್ತಿದ್ದರಂತೆ.

ಕೇವಲ ನಾಲ್ಕು ಬೋಗಿಗಳಿರುವ ಈ ರೈಲಿನ ಪ್ರತಿ ಬೋಗಿಯಲ್ಲೂ 24 ಮಂದಿ ಪ್ರಯಾಣಿಸಬಹುದು. ರೈಲು ನಿಲ್ದಾಣ ಚಿಕ್ಕದಾಗಿದ್ದು, ಈ ಮಾರ್ಗದಲ್ಲಿ ಪ್ರತಿದಿನ ಎರಡು ರೈಲುಗಳು ಮಾತ್ರ ಸಂಚರಿಸುತ್ತಿವೆ. ಬಿಲಿಮೊರಾ–ವಾಘೈ ನಡುವೆ ಕೇವಲ 63 ಕಿ.ಮೀ. ದೂರವಿದ್ದರೂ ಪ್ರಯಾಣ 3 ಗಂಟೆ ಹಿಡಿಯುತ್ತದೆ.

ಬಿಲಿಮೊರಾ–ವಾಘೈ ಪಾರಂಪರಿಕ ರೈಲು ಪ್ರಯಾಣದ ಸುಖ ಅನುಭವಿಸಲು ದೇಶದೆಲ್ಲೆಡೆಯಿಂದ ಪ್ರಯಾಣಿಕರು ಬರುತ್ತಾರಾದರೂ, ಹೆಚ್ಚಾಗಿ ಇಲ್ಲಿನ ಬುಡಕಟ್ಟು ಜನಾಂಗದವರು ದಿನನಿತ್ಯದ ಬದುಕಿಗೆ ಈ ರೈಲಿನ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ.

ಗುಜರಾತ್ ಪ್ರವಾಸ ಮುಗಿಸಿ ಸೂರತ್‌ನಿಂದ ಹುಬ್ಬಳ್ಳಿಗೆ ಹಿಂದಿರುಗುವಾಗ ಕೇವಲ 9 ನಿಲುಗಡೆಗಳಿರುವ ವಾಘೈ–ಬಿಲಿಮೊರಾ ನ್ಯಾರೋಗೇಜ್ ಹೆರಿಟೇಜ್ ರೈಲಿನಲ್ಲಿ ಪ್ರಯಾಣಿಸಿ ಆನಂದಿಸುವ ಸುಯೋಗ ಒದಗಿಬಂದಿತ್ತು. ದೂರ ಪ್ರಯಾಣದ, ಅತಿ ವೇಗದ ರೈಲುಗಳಲ್ಲಿ ಸಾವಿರಾರು ಕಿ.ಮೀ. ಪ್ರಯಾಣಿಸುವ ಅನುಭವಕ್ಕಿಂತಲೂ ಕೇವಲ ನಾಲ್ಕು ಬೋಗಿಗಳ, ಅತಿ ಕಡಿಮೆ ವೇಗದ ರೈಲಿನಲ್ಲಿ ಪಯಣಿಸುವಾಗಿನ ಅನುಭವ ವಿಭಿನ್ನವೆನಿಸಿತು. ಸಸ್ಯ ಸಂಕುಲದ ಅರಣ್ಯ ಪ್ರದೇಶದ ನಡುವೆ ರೈಲು ಸೀಟಿ ಹೊಡೆಯುತ್ತಾ ಸಾಗುವಾಗ ಮೈನವಿರೇಳುತ್ತಿತ್ತು. 111 ವರ್ಷಗಳ ಪಾರಂಪರಿಕ ರೈಲಿನಲ್ಲಿ ಪಯಣಿಸಿದ ಸಂತಸ ನಮ್ಮದಾಗಿತ್ತು.

ರೈಲು ಪ್ರಯಾಣದಲ್ಲಿ ವಿಭಿನ್ನ ಅನುಭವ ಪಡೆಯಲು, ಶ್ರೀಮಂತ ಸಸ್ಯಸಂಕುಲದ ಅರಣ್ಯ ಹಾಗೂ ಬುಡಕಟ್ಟು ಜನಾಂಗದ ಪುಟ್ಟ ಹಳ್ಳಿಗಳನ್ನು ನೋಡಬಯಸುವವರಿಗೆ ಬಿಲಿಮೊರಾ–ವಾಘೈ ಮಾರ್ಗದ ರೈಲು ಪ್ರಯಾಣ ಹೇಳಿ ಮಾಡಿಸಿದಂತಿದೆ.

ಪ್ರತಿಕ್ರಿಯಿಸಿ: feedback@sudha.co.in